

# ‘ದೇವತಾತ್ಮಾ ಹಿಮಾಲಯ’

**ಡಾ. ಹೆಚ್. ಪಾಂಡುರಂಗ ವಿಠಲ**

ಪ್ರಾಚೀನ ಕಾಲದಿಂದಲೂ ಹಿಮಾಲಯ ಪರ್ವತಶ್ರೇಣಿಯು ಸಾಧು-ಸಂತರ, ಆಧ್ಯಾತ್ಮಿಕ ಸಾಧಕರ ತಾಣವಾಗಿದೆ. ಹಿಮಾಲಯದ ಬಗ್ಗೆ ಕಾಳಿದಾಸ ಹೇಳುತ್ತಾ ಅದನ್ನು ‘ದೇವತಾತ್ಮಾ’ ಎಂದು ಕರೆದಿದ್ದಾನೆ. ಅನೇಕ ತೀರ್ಥಗಳ, ಪುಣ್ಯಕ್ಷೇತ್ರಗಳ ಆಗರವಾಗಿರುವ ಈ ಭೂಪ್ರದೇಶವನ್ನು ಕುರಿತು ಬರೆದಿರುವ ಲೇಖಕರು ಮೈಸೂರಿನಲ್ಲಿ ಕನ್ನಡ ಉಪನ್ಯಾಸಕರಾಗಿದ್ದಾರೆ. ಉತ್ತಮ ಚಿಂತಕರೂ, ಬರಹಗಾರರೂ ಆಗಿರುವ ಇವರ ಅನೇಕ ಬರಹಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ.

**ಭಾ**ರತೀಯರ ಮನೋಮಾನಸದಲ್ಲಿ ಹಿಮಾಲಯದ ಪ್ರಭಾವ ಅಚ್ಚಳಿಯದೆ ಉಳಿದಿದೆ.

ಕಾಳಿದಾಸನ ಕುಮಾರಸಂಭವ ಮಹಾಕಾವ್ಯದ ಆರಂಭ ಶ್ಲೋಕ ಹೀಗಿದೆ:

**ಅಸ್ತ್ಯುತ್ತರಸ್ಯಾಂ ದಿಶಿ ದೇವತಾತ್ಮಾ**
**ಹಿಮಾಲಯೋ ನಾಮ ನಗಾಧಿರಾಜಃ ।**
**ಪೂರ್ವಾಪರೌ ತೋಯನಿಧೀ ವಗಾಹ್ಯ**
**ಸ್ಥಿತಃ ಪೃಥಿವ್ಯಾ ಇವ ಮಾನದಂಡಃ ॥**

(ಉತ್ತರ ದಿಕ್ಕಿಗೆ ದೇವತೆಗಳ ನಿವಾಸವಿರುವ ಹಿಮಾಲಯ ಹೆಸರಿನ ಪರ್ವತಗಳ ಸ್ವಾಮಿ, ಪೂರ್ವ ಹಾಗೂ ಪಶ್ಚಿಮ ದಿಕ್ಕಿಗೆ ಇರುವ ಸಮುದ್ರದಲ್ಲಿ ಪೃಥ್ವಿಯ ಮಾನದಂಡದಂತೆ ನಿಂತಿರುತ್ತದೆ.)

ಕಾಳಿದಾಸನಷ್ಟೇ ಅಲ್ಲ, ಇತರ ಮಹಾಕವಿಗಳ ಮೇಲೂ ಹಿಮಾಲಯದ ಪ್ರಭಾವ ಹೆಚ್ಚೇ ಇದೆ. ಬಾಣನ ಕಾದಂಬರಿಯಿಡೀ ಹಿಮಾಲಯದ ಧವಳ ಕಾಂತಿಯಲ್ಲಿ ಮಿಂದಂತಿದೆ. ಆದಿಶಂಕರಾಚಾರ್ಯರು ಬದರಿಯಲ್ಲಿ ನಾರಾಯಣನ ಮೂರ್ತಿಯನ್ನು ಸ್ಥಾಪಿಸಿ, ಕಾಶ್ಮೀರದ ಶಾರದಾಪೀಠಕ್ಕೆ ಹೋಗಿದ್ದರು; ಅವರ ಕೊನೆ ಕೇದಾರದ ಹಿಂದಿನ ಪರ್ವತದಲ್ಲಿ ಆಯಿತು. ಮಧ್ವಾಚಾರ್ಯರು ಮೂರು ಸಲ ಹಿಮಾಲಯಕ್ಕೆ ಹೋಗಿ, ವ್ಯಾಸರಿಂದಲೇ ಉಪದೇಶ ಪಡೆದರು; ಅವರ ಸಮಾಧಿ ಬದರಿಯಲ್ಲಿ ಆಗಿರಬಹುದು ಎಂಬ ವದಂತಿಯಿದೆ. ಆಧುನಿಕರಲ್ಲಿ ಸ್ವಾಮಿ ವಿವೇಕಾನಂದರು ನೀರವ ಧ್ಯಾನ ಮತ್ತು ಶಾಂತಜೀವನದ ನೆಲೆಯಾದ ಹಿಮಾಲಯದಲ್ಲೆ ಜೀವನ ಕಳೆಯಬೇಕೆಂದು ಆಶಿಸಿದ್ದರು; ಮಾಯಾವತಿಯಲ್ಲಿ ಅದ್ವೈತ ಆಶ್ರಮ ಸ್ಥಾಪಿಸಿದರು. ಸ್ವಾಮಿ ರಾಮತೀರ್ಥರ ಹಿಮಾಲಯ ಯಾತ್ರೆಯ ಅನುಭವಗಳು ಮನಸೆಳೆಯುವಂತಹದು. ಅತಿ ಕಠಿಣವಾದ ಛಾಯಾಪಥ ಎಂಬ ಒಳಮಾರ್ಗದಿಂದ ಅವರು ಕಾಲ್ನಡಿಗೆಯಲ್ಲಿ ಮೂರು ದಿನಗಳಲ್ಲಿ ಯಮುನೋತ್ರಿಯಿಂದ ಗಂಗೋತ್ರಿಗೆ ಹೋಗುವಾಗ ಅವರಿಗೆ ಏಕಾಂತದಲ್ಲಿ ಅನಾಹತ ನಾದ ಎಲ್ಲೆಲ್ಲೂ ಕೇಳಿದ ಅನುಭವವಾಯಿತು. ಮಹಾಯೋಗಿ ಅರವಿಂದರಿಗೆ ಕಾಶ್ಮೀರದ ಶಂಕರ ಪರ್ವತದ ಮೇಲೆ ನಿಂತಾಗ ಅನಿರ್ವಚನೀಯ ಮೌನ ಶಾಂತಿಯ ಅರಿವಾಗಿ, ಅವರು ‘ಅದ್ವೈತ’ ಎಂಬ ಕವನವನ್ನು ರಚಿಸಿದರು.

ಹೀಗೆ ಪರ್ವತಪಂಙ್ತಿಗಳಲ್ಲೇ ಹಿರಿದಾದ ಹಿಮಾಲಯವು ದೇವತೆಗಳ ಆವಾಸಸ್ಥಾನ, ಪೂರ್ವ-ಪಶ್ಚಿಮ ಸಮುದ್ರಗಳ ನಡುವೆ ಭೂಮಿಯ ಮಾನದಂಡದಂತೆ ನಿಂತಿದೆ ಎಂಬುದು ಸುಳ್ಳಲ್ಲ. ಭಾರತ ಉತ್ತರದ ಅಂಚಿನ ಉದ್ದಕ್ಕೂ ೨,೪೦೦ ಕಿ.ಮೀ. ಉದ್ದ, ೧೬೦–೩೨೦ ಕಿ.ಮೀ. ಅಗಲ, ಸರಾಸರಿ ೧೮ ,೦೦೦ ಅಡಿ ಎತ್ತರದ ಔನ್ನತ್ಯದ ಭೂಪ್ರದೇಶ ವಿಶ್ವದಲ್ಲಿ ಇನ್ನೆಲ್ಲೂ ಇಲ್ಲ. ವಿಶ್ವದಲ್ಲೇ ಅತ್ಯಂತ ಎತ್ತರದ (೨೯,೦೨೮ ಅಡಿ) ಎವರೆಸ್ಟ್ ಅಥವಾ ಗೌರೀಶಂಕರ ಶಿಖರ ಇಲ್ಲಿರುವುದಲ್ಲದೆ, ವಿಶ್ವದ ಮೊದಲ ಹತ್ತು ಅತ್ಯುನ್ನತ

ಪರ್ವತಗಳಲ್ಲಿ ಒಂಬತ್ತು ಇಲ್ಲಿಯೇ ಇವೆ. ಧ್ರುವಪ್ರದೇಶಗಳನ್ನು ಬಿಟ್ಟರೆ, ಅತ್ಯಧಿಕ ಹಿಮನದಿಗಳ ವಿಸ್ತೀರ್ಣ ಹಿಮಾಲಯದಲ್ಲೆ ಇದೆ. ಜಗತ್ತಿನ ಅತ್ಯಂತ ಕಿರಿಯ ವಯಸ್ಸಿನ (೬.೫ ಕೋಟಿ ವರ್ಷ) ಪರ್ವತಪಂಙ್ತಿಯೂ ಇದೇ.

ಟಿಬೆಟ್, ನೇಪಾಳ, ಭೂತಾನ, ಭಾರತ, ಇನ್ನೂ ಅನೇಕ ದೇಶಗಳ ಜನರಿಗೆ ಈ ಪರ್ವತ ಶ್ರೇಣಿ ದೇವರುಗಳ ವಾಸಸ್ಥಾನವಾಗಿದ್ದು, ಪವಿತ್ರವಾಗಿದ್ದು, ಅವುಗಳ ಸಂಸ್ಕೃತಿಯೊಡನೆ ಗಾಢವಾದ ಸಂಬಂಧ ಹೊಂದಿದೆ. ಹಿಮಾಲಯದ ಬದರೀನಾಥ, ಕೇದಾರನಾಥ, ಗಂಗೋತ್ರಿ, ಯಮುನೋತ್ರಿ, ಮಧ್ಯಮಹೇಶ್ವರ, ರುದ್ರಪ್ರಯಾಗದ ಕಾರ್ತಿಕ ಸ್ವಾಮಿ, ತುಂಗನಾಥ, ನೇಪಾಳದ ಮುಕ್ತಿನಾಥ, ಕಾಶ್ಮೀರದ ಅಮರ ನಾಥ, ಪತಿಭಾರದೇವಿ, ಕಾಲಿನ್ಚೋಕ್ ಭಗವತಿ ಈ ಹನ್ನೊಂದು ದೇವಾಲಯಗಳು ಅತಿ ಪ್ರಸಿದ್ಧವಾಗಿದ್ದು, ನೋಡಲೇಬೇಕಾದವು.

ಲೌಕಿಕವಾಗಿಯೂ ಹಿಮಾಲಯವು ಭಾರತ ಉಪಖಂಡದ ಬದುಕಿಗೆ ಅಗತ್ಯ. ಮಾನ್ಸೂನ್ ಮಳೆ ಮೋಡಗಳನ್ನು ತಡೆದು, ಮುಂಗಾರು ಮಳೆಗೆ ಕಾರಣವಾಗಿ, ಕೃಷಿ, ಕುಡಿಯುವ ನೀರು, ಕೈಗಾರಿಕೆ, ವಿದ್ಯುತ್ ಉತ್ಪಾದನೆಗಳಿಗೆ ಅಗತ್ಯವಾದ ವಾರ್ಷಿಕ ಜಲ ಸಂಪತ್ತಿಗೆ ಕಾರಣವಾಗಿದೆ. ಇದಲ್ಲದೆ, ತನ್ನಲ್ಲಿನ ಹಿಮನದಿಗಳಿಂದ ಏಷಿಯಾದ ಏಳು ಮುಖ್ಯ ನದಿಗಳಾದ ಗಂಗಾ, ಸಿಂಧೂ, ಬ್ರಹ್ಮಪುತ್ರ, ಸಾಲ್ವೀನ್, ಮೆಕಾಂಗ್, ಯಾಂಗ್ಜೇ ಮತ್ತು ಹ್ವಾಂಗ್ ಹೋಗಳಿಗೆ ನೀರನ್ನು ಒದಗಿಸುತ್ತಿದೆ. ಹೀಗಾಗದಿದ್ದಲ್ಲಿ ಮಳೆ ಇಲ್ಲದ ಋತುಗಳಲ್ಲಿ ಇವೆಲ್ಲ ಬತ್ತಿಹೋಗುತ್ತಿದ್ದುವು. ಹೀಗೆ ಜಗತ್ತಿನ ಪ್ರತಿಶತ ೧೭ರಷ್ಟು ಜನ ಹಿಮಾಲಯದ ನೀರಿನಿಂದಲೇ ಬದುಕು ನಡೆಸುತ್ತಿದ್ದಾರೆ.

ವಿಜ್ಞಾನಿಗಳ ಪ್ರಕಾರ ಭರತಖಂಡವು ಹಿಂದೆ ಆಸ್ಟ್ರೇಲಿಯಾ, ಅಂಟಾರ್ಕ್ಟಿಕಾ ಜೊತೆಗಿದ್ದು, ೧೮ ಕೋಟಿ ವರ್ಷಗಳ ಹಿಂದೆ ಅದು ಬೇರ್ಪಟ್ಟು, ಉತ್ತರಕ್ಕೆ ನಿಧಾನವಾಗಿ ಚಲಿಸುತ್ತಾ ಆರೂವರೆ ಕೋಟಿ ವರ್ಷಗಳ ಹಿಂದೆ ಏಷ್ಯಾಖಂಡವನ್ನು ಹೆಚ್ಚು ಶಕ್ತಿಯಿಂದ ಒತ್ತತೊಡಗಿತು. ಕಡಲತಳ ಮಡಚಿ, ಮೇಲೆದ್ದು, ಮೂರೂವರೆ ಕೋಟಿ ವರ್ಷಗಳ ಹಿಂದೆ ಹಿಮಾಲಯವಾಗಿ ರೂಪುಗೊಳ್ಳುತ್ತ ಹೋಯಿತು. ಆರು ಲಕ್ಷ ವರ್ಷಗಳ ಹಿಂದೆ ೧೨,೦೦೦ ಅಡಿ ಎತ್ತರವಾಗಿದ್ದು, ಈಗ ೧೮,೦೦೦ ಅಡಿ ಎತ್ತರವಿದ್ದು, ವರ್ಷಕ್ಕೆ ಒಂದೆರಡು ಸೆಂಟಿಮೀಟರಿನಷ್ಟು ಎತ್ತರವಾಗುತ್ತಲೇ ಇದೆ. ಇನ್ನು ೧೦ ಕೋಟಿ ವರ್ಷಗಳವರೆಗೂ ಈ ಒತ್ತುವಿಕೆ ನಿಲ್ಲುವುದಿಲ್ಲ. ಹೀಗಾಗಿ, ಈ ಪ್ರದೇಶದಲ್ಲಿ ಭೂಕಂಪಗಳು ಸಾಮಾನ್ಯ.

### ಹಿಮಾಲಯ ಯಾತ್ರೆ

ಪ್ರಾಚೀನ ಕಾಲದಿಂದಲೂ ಕಾಶ್ಮೀರದ ಅಮರನಾಥದಿಂದ ಆರಂಭಿಸಿ, ಅರುಣಾಚಲ ಪ್ರದೇಶದ ತವಾಂಗ್ ವರೆಗೂ ಸಂಪೂರ್ಣ ಹಿಮಾಲಯ ಪರ್ವತಶ್ರೇಣಿಗಳನ್ನು ವ್ಯಾಪಿಸಿಕೊಂಡ ಅನೇಕ ಆಧ್ಯಾತ್ಮಿಕ ಯಾತ್ರೆಗಳು ಜನಪ್ರಿಯ. ಚಾರೋಧಾಮ್ ಯಾತ್ರಾ ತರಹದ ಯೋಜಿತ ತೀರ್ಥಯಾತ್ರಾ ಪ್ರವಾಸಗಳು ಹಲವು ಇವೆ. ಪ್ರಕೃತಿಯನ್ನು ಇಷ್ಟಪಟ್ಟು ಚಾರಣ ನಡೆಸುವವರಿಗೆ ಚಾರಣ ಪ್ರವಾಸಗಳೂ ಇವೆ. ಉತ್ತರಾಖಂಡ, ಹಿಮಾಚಲ ಪ್ರದೇಶ, ಕಾಶ್ಮೀರ, ಟಿಬೆಟ್, ದಾರ್ಜಿಲಿಂಗ್‌ನಿಂದ ನೇಫಾದ ವರೆಗೆ ಎಂದು ಹಿಮಾ ಲಯದ ಭಾಗಗಳ (ಪ್ರದೇಶ) ಮೇಲೆ ಯಾತ್ರೆಗಳನ್ನು ವಿಭಾಗಿಸ ಬಹುದು.

ಹಿಂದೆ ಜನರು ಈ ಸ್ಥಳಗಳಿಗೆ ನಡೆದೇ ಹೋಗುತ್ತಿದ್ದರು. ಹೀಗಾಗಿ, ಪ್ರಸಿದ್ಧ ಯಾತ್ರಾ ಪುಸ್ತಕಗಳಲ್ಲಿನ ವರ್ಣನೆಗಳೆಲ್ಲ ಅನೇಕ ಸ್ಥಳಗಳ, ದೇವಸ್ಥಾನಗಳ ವಿವರಣೆಗಳು, ಸಣ್ಣಪುಟ್ಟ ವಿವರಗಳೊಡನೆ ಆಕರ್ಷಕವಾಗಿ ಇರುತ್ತವೆ. ಅವನ್ನು ನೋಡಲು ಹೆಚ್ಚು ದಿನ ಬೇಕು. ಈಗಿನವರ ತೀರ್ಥಯಾತ್ರೆ, ಇಷ್ಟೇ ದಿನಗಳೊಳಗೆ ಮುಗಿಯಬೇಕು ಎನ್ನುವ ರಜಾನಿರ್ಬಂಧಗಳಿಂದ ಸೀಮಿತ. ಯೋಜಿತ ಪ್ರವಾಸ ಇಂತಹವರಿಗೆ ಸೂಕ್ತ. ಇಲ್ಲೂ ಕೆಲವರು ಹೆಲಿಕಾಪ್ಟರ್ ಇದ್ದರೆ, ಅದರಲ್ಲಿ ಹೋಗಿ, ದೇವರನ್ನು ದರ್ಶಿಸಿ, ಪುಣ್ಯ ಸಂಪಾದಿಸಿ, ಶಕ್ತಿ ಉಳಿಸಿ, ಹಿಂದಿರುಗಿ, ನಂತರ ಇತರ ಯೋಜಿತ ಪ್ರವಾಸಿಗಳೊಡನೆ ಬಂದು ಸೇರುವ ಆತುರದವರು. ಯಾತ್ರೆ ಯೋಜಿಸುವವರು ಜಾಹೀರಾತು ನೀಡುತ್ತಾರೆ. ದೈಹಿಕ, ಆರ್ಥಿಕ ಸ್ಥಿತಿಗೆ ಅನುಗುಣವಾಗಿ ಇವರ ಸಹಾಯದಿಂದ ಯಾತ್ರೆ ಮಾಡಬಹುದು. ಚಾರಣದವರು ನಡೆದೇ ಹೋಗುವವರಾದರೂ, ಇವರ ಉದ್ದೇಶ ತೀರ್ಥಯಾತ್ರೆಯಲ್ಲ, ಪ್ರಕೃತಿ ವೀಕ್ಷಣೆ. ಹೀಗಾಗಿ, ಇವು ಸಾಂಪ್ರದಾಯಿಕವಲ್ಲ. ಸಾಂಪ್ರದಾಯಿಕವಾಗಿ ಪ್ರಖ್ಯಾತವಾಗಿರುವ ಯಾತ್ರೆಗಳನ್ನು ನೋಡೋಣ.

**೧. ಚಾರ್ ಧಾಮ್ ಯಾತ್ರಾ:** ಶಂಕರಾಚಾರ್ಯರು ನಾಲ್ಕು ಧಾಮಗಳನ್ನು ಹೇಳುತ್ತಾರೆ. ಸತ್ಯಯುಗದ ಬದರೀ, ತ್ರೇತಾಯುಗದ ರಾಮೇಶ್ವರಂ, ದ್ವಾಪರಯುಗದ ದ್ವಾರಕಾ, ಕಲಿಯುಗದ ಜಗನ್ನಾಥ ಪುರಿ. ಆದರೆ ಈಗ ಚಾರ್‌ಧಾಮ್ ಯಾತ್ರೆ ಎಂದರೆ ಯಮುನೋತ್ರಿ, ಗಂಗೋತ್ರಿ, ಕೇದಾರ, ಬದರಿ. ಇವನ್ನು ಮೇಲ್ಕಾಣಿಸಿದ ಕ್ರಮದಲ್ಲಿ ನೋಡಬೇಕು. ವಾಹನಗಳಲ್ಲಿ ಹೋಗಬಹುದಾದದ್ದರಿಂದ ಬದರಿ, ಗಂಗೋತ್ರಿಗಳು ಇದ್ದುದರಲ್ಲಿ ಸುಲಭ; ಯಮುನೋತ್ರಿ, ಕೇದಾರಗಳನ್ನು ಹತ್ತಿ ಹೋಗಬೇಕು. ಸಾಮಾನ್ಯವಾಗಿ ಎರಡು ಧಾಮಗಳನ್ನು, ಕೆಲವರು ಒಂದೇ ಧಾಮವನ್ನು ಒಂದು ಬಾರಿಗೆ ನೋಡುತ್ತಾರೆ. ಕೇದಾರ ಅನಂತರ ಬದರಿ; ಯಮುನೋತ್ರಿ ಅನಂತರ ಗಂಗೋತ್ರಿ. ಯಾತ್ರೆಯ ಪ್ರಾರಂಭ ಹರಿದ್ವಾರದಿಂದ. ಅಲ್ಲಿನ ಬ್ರಹ್ಮಕುಂಡ ಅಥವಾ ಹರೀ ಕೀ ಪೌಡಿಯಲ್ಲಿನ ಗಂಗಾ ಆರತಿ ಮರೆಯಲಾಗದಂತಹದು.

**ಸಿದ್ಧತೆಗಳು:** ಜೂನ್‌ನಿಂದ ನವೆಂಬರ್‌ವರೆಗೆ ನಡೆಯುವ ಯೋಜಿತ ಯಾತ್ರೆಗಳಲ್ಲಿ , ಆಯೋಜಕರೇ ಎಲ್ಲದರ ಜವಾಬ್ದಾರಿ ವಹಿಸಿದರೂ, ಔಷಧಿಗಳು, ಚಳಿ ತಡೆಯಲು ಉಣ್ಣೆಯ ಬಟ್ಟೆಗಳು, ಕಪ್ಪು ಕನ್ನಡಕ, ಒಣ ಹಣ್ಣುಗಳು ಮುಂತಾದುವನ್ನು ನಾವೇ ತೆಗೆದುಕೊಂಡು ಹೋಗಬೇಕು. ನಾವೇ ನೀರನ್ನೂ ಒಯ್ಯುವುದು ಸೂಕ್ತ.

ಹೃಷೀಕೇಶ–ದೇವಪ್ರಯಾಗ–ಶ್ರೀನಗರ–ರುದ್ರಪ್ರಯಾಗ–ಗುಪ್ತಕಾಶಿ–ತ್ರಿಜುಗಿ ನಾರಾಯಣ–ಗೌರಿಕುಂಡ ಮಾರ್ಗವಾಗಿ ಕೇದಾರನಾಥಕ್ಕೆ ಹೋಗಬೇಕು. ಕೆಲವು ಟ್ರಾವಲ್ಸ್‌ನವರು ಶ್ರೀನಗರದಲ್ಲಿ ಒಂದು ದಿನ ವಾಸ್ತವ್ಯ ಮಾಡಿಸುತ್ತಾರೆ. ದೇವಪ್ರಯಾಗದಲ್ಲಿ ಭಾಗೀರಥಿ–ಅಲಕನಂದಾ ಸಂಗಮದಲ್ಲಿ ಸ್ನಾನಮಾಡಿ, ಕಿರಾತಾರ್ಜುನೀಯ ಯುದ್ಧ ನಡೆದ ಭಿಲ್ಲೇಶ್ವರದ ಶಿವನಿಗೆ ಪೂಜೆ ಸಲ್ಲಿಸ

ಬಹುದು. ಗೌರೀಕುಂಡದಿಂದ ಕುದುರೆ, ದಂಡಿ ಅಥವಾ ಕಾಲ್ನಡಿಗೆಯಲ್ಲಿ ೧೬ ಕಿ.ಮೀ. ಮೇಲೇರಬೇಕು. ಕೆಲವೆಡೆ ನಾಲ್ಕೈದು ಅಡಿ ಮಾತ್ರ ಇರುವ, ಕಲ್ಲಿನ ತುಣುಕುಗಳನ್ನು ಸೇರಿಸಿ ಮಾಡಿದ ಮಾರ್ಗ. ಮೇಲಿನಿಂದ ಬರುವ ಯಾತ್ರಿಕರು, ಕುದುರೆಗಳು ಪರ್ವತದ ಗೋಡೆಗುಂಟ ಇಳಿಯುವುದರಿಂದ, ಮೇಲೇರುವ ಕುದುರೆ, ಜನರು ಪ್ರಪಾತದ ಅಂಚಿನಲ್ಲೇ ಸಾಗಬೇಕು. ೨೦೧೩ರ ಜೂನ್ ೧೪ ರಿಂದ ೧೭ರ ವರೆಗೆ ನಡೆದ ಜಲಪ್ರಳಯದಲ್ಲಿ ೧೦,೦೦೦ ಜನ ಸತ್ತು ೩,೦೦೦ ಜನ ನಾಪತ್ತೆಯಾಗಿದ್ದರು. ಎಲ್ಲ ಕಟ್ಟಡಗಳೂ ನಾಶವಾದರೂ, ದೇವಸ್ಥಾನ ಮಾತ್ರ ಆಶ್ಚರ್ಯಕರವಾಗಿ ಉಳಿದಿತ್ತು. ಇದರ ಕಹಿ ನೆನಪು ಮಾರ್ಗವನ್ನು ಇನ್ನಷ್ಟು ಕಠಿನವಾಗಿಸುತ್ತದೆ. (ಈ ವರ್ಷ ಕೇದಾರ ಯಾತ್ರೆಯ ಹೆಲಿಕಾಪ್ಟರ್ ಕೂಡ ಪತನವಾಗಿತ್ತು.) ಕೇದಾರದಲ್ಲಿ ಇರುವ ಅನುಕೂಲಗಳಲ್ಲಿಯೆ ಒಂದು ರಾತ್ರಿ ಉಳಿಯುವುದು ಅನಿವಾರ್ಯ. ಕೇದಾರನಾಥ ದರ್ಶನದಿಂದ ಧನ್ಯತೆ ಮೂಡುತ್ತದೆ. ಇಲ್ಲಿಂದ ಅತಿ ಸುಂದರ ವಾಸುಕಿ ತಲ್ ಸರೋವರಕ್ಕೆ ಹೋಗಬಹುದು.

ಅಲ್ಲಿಂದ ಬದರಿಗೆ ಹೋಗುವವರು ಜೋಷೀಮಠಕ್ಕೆ ಹೋಗುತ್ತಾರೆ. ಕೇದಾರದಿಂದ ತಂದ ಮೂರ್ತಿಯನ್ನು ಚಳಿಗಾಲದ ಆರು ತಿಂಗಳು ಪೂಜಿಸುವ ಊಖೀಮಠ ಮೂಲಕವಾಗಿ –ತುಂಗನಾಥ –ಗೋಪೇಶ್ವರದಿಂದ ಜೋಷೀಮಠಕ್ಕೆ ಹೋಗಿ ತಂಗುತ್ತಾರೆ. ಇಲ್ಲಿ ಶಂಕರಾಚಾರ್ಯರು ಸ್ಥಾಪಿಸಿದ ಮಠ, ಚಳಿಗಾಲದ ಆರು ತಿಂಗಳು ಬದರೀನಾಥನನ್ನು ಪೂಜಿಸುವ, ನೃಸಿಂಹ ಸಾಲಿಗ್ರಾಮವಿರುವ ದೇವಾಲಯ, ಅಷ್ಟಕಾಳಿಗಳ, ಜ್ಯೋತಿರ್ಲಿಂಗ, ವಾಸುದೇವ, ಮಹಾದೇವ ದೇವಾಲಯಗಳೂ ಇವೆ. ಜ್ಯೋತಿರ್ಮಠದ ಹತ್ತಿರವಿರುವ ಪುರಾತನ ಬೃಹತ್ ವೃಕ್ಷದ ಕೆಳಗಿನ ಗುಹೆಯಲ್ಲಿ ಶಂಕರರು ತಪಸ್ಸು ಮಾಡಿದ್ದರೆನ್ನಲಾದ ಗವಿ ಇದೆ. ಜೋಷೀಮಠದಿಂದ ಬದರಿಗೆ ೩೦ ಕಿಲೋಮೀಟರ್. ಬದರಿ ನೋಡಿ ವಾಪಸು ಬರುವಾಗ ಜೋಷಿಮಠ ಮಾರ್ಗವಾಗಿ ಹೃಷೀಕೇಶ ಎರಡು ದಿನದ ಹಾದಿ.

ಬದರಿಯಲ್ಲಿ ಉಳಿಯಲು ಕನ್ನಡಿಗರಿಗೆ ಪೇಜಾವರ ಸಂಸ್ಥಾನದ ಅನಂತ ಮಠವಿದೆ. ಇಲ್ಲಿ ವ್ಯಾಸ–ಗಣೇಶ ಗುಹೆಗಳು, ಮಾನ ಪಾಸ್, ವಸುಧಾರಾ ಮೊದಲಾದ ಸುಂದರ ಸ್ಥಳಗಳಿವೆ. ಆಸಕ್ತರು ಪಾಂಡುಕೇಶ್ವರದ ಮೂಲಕ ಹೇಮಕುಂಡ ಸಾಹಿಬ್ (ಗುರುದ್ವಾರ ಇದೆ), ಹೂವಿನಕೊಳ್ಳ, ಸಾತೋಪಂತ್ ಸರೋವರ ಮೊದಲಾದೆಡೆ ಹೋಗಬಹುದು.

ಯಮುನೋತ್ರಿ–ಗಂಗೋತ್ರಿ ಯಾತ್ರೆ ಮಾಡಲು ಹೃಷೀಕೇಶದಿಂದ ನರೇಂದ್ರನಗರ–ಟೆಹರಿ–ಧರಾಸುಗೆ ಬರಬೇಕು. ಇಲ್ಲಿ ಅಥವಾ ಸ್ವಲ್ಪ ದೂರದ ಜಿಲ್ಲಾಕೇಂದ್ರ ಉತ್ತರಕಾಶಿಯಲ್ಲಿ ಉಳಿಯಬೇಕು. ಧರಾಸುವಿನಿಂದ ಡಂಡಲ್ಗಾವ್–ಗಂಗಾನಾಣಿ–ಹನುಮಾನ್ ಚಟ್ಟಿಯಿಂದ ನಡೆದು ಯಮುನೋತ್ರಿ ಸೇರಬೇಕು. ಇಲ್ಲಿನ ಬಿಸಿ ನೀರಿನ ಕುಂಡ ಪ್ರಸಿದ್ಧ. ಅದರಲ್ಲಿ ಇಳಿಬಿಟ್ಟ ಅಕ್ಕಿ ಅನ್ನವಾಗುತ್ತದೆ, ಅದೇ ಪ್ರಸಾದ. ಪುನಃ ಇಳಿದು ಉತ್ತರಕಾಶಿ ಸೇರಬೇಕು.

ಉತ್ತರಕಾಶಿಯ ವಿಶ್ವನಾಥ ಹಾಗೂ ಏಕಾದಶ ರುದ್ರರ ಮಂದಿರಗಳು ಪ್ರಸಿದ್ಧ. ಇದಲ್ಲದೆ ಗೋಪೇಶ್ವರ, ದತ್ತಾತ್ರೇಯ, ಪರಶುರಾಮ, ಭೈರವ, ಅನ್ನಪೂರ್ಣಾ, ವಿಮಲೇಶ್ವರ, ಶಿವ, ದುರ್ಗಾ ಗುಡಿಗಳೂ ಇವೆ. ಕಿರಾತಾರ್ಜುನೀಯ ಯುದ್ಧ ಇಲ್ಲೇ ಆಯಿತೆನ್ನುತ್ತಾರೆ. ಇಲ್ಲಿಂದ ಭಟವಾಡಿ–ಗಂಗಾನಾಣಿ–ಸೂಖಿ–ಹರಸಿಲ್–ಧರಾಲಿ–ಜಾಂಗಲಾ–ಭೈರವಘಾಟ್ ಮೂಲಕ ಗಂಗೋತ್ರಿ ತಲುಪಬಹುದು. ಗಂಗೋತ್ರಿ ಅನೇಕ ಗುಪ್ತಯೋಗಿಗಳ ತಾಣ. ತಪಸ್ಸು ಮಾಡಲು ಅನೇಕ ಗುಹೆಗಳು, ಕುಟೀರಗಳು, ಬೇಕಾದ ಆಹಾರ ಇಲ್ಲಿ ದೊರೆಯುತ್ತವೆ. ಸೂರ್ಯಕುಂಡ, ವಿಷ್ಣುಕುಂಡ, ಬ್ರಹ್ಮಕುಂಡ, ಗಂಗೆ ಎತ್ತರದಿಂದ ಹಾರುವ ಗೌರೀಕುಂಡಗಳು ಇಲ್ಲಿವೆ. ಧೈರ್ಯವುಳ್ಳವರು ೨೪ ಕಿ.ಮೀ. ನಡೆದು ಗೋಮುಖ (ಗ್ಲೇಷಿಯರ್‌ನೊಳಗಿಂದ ಗಂಗಾ ಮೊದಲು ಕಾಣಿಸಿಕೊಳ್ಳುವ ಸ್ಥಾನ), ಅದಕ್ಕೂ ಮೇಲಿನ ತಪೋವನ ಸಂದರ್ಶಿಸಬಹುದು.

ಈ ಭಾಗದ ಯಾತ್ರೆಯಲ್ಲದ ಪ್ರವಾಸ ಸ್ಥಳಗಳೂ ಹಲವು ಇವೆ. ಡೆಹ್ರಾಡೂನ್ ಬಳಿಯ ಮುಸ್ಸೂರಿ ಪ್ರೇಕ್ಷಣೀಯ ಸ್ಥಳ. ಸಿಮ್ಲಾಕ್ಕೆ ಹೋಗುವ ದಾರಿಯಲ್ಲಿನ ಚಕ್ರೋತ ಇನ್ನೊಂದು ಸುಂದರ ಸ್ಥಳ. ಚಿವುಡಪುರ–ಕಾಲ್ಸಿ ಎಂಬಲ್ಲಿ ಅಶೋಕ ಶಿಲೆ, ಪಾಲಿ ಭಾಷೆಯ ಹಲವು ಶಾಸನಗಳು ಇವೆ. ಜೋಷೀಮಠದಿಂದ ನಂದ ಪ್ರಯಾಗಕ್ಕೆ ಹೋಗಿ, ಅಲ್ಲಿಂದ ಬೈಜನಾಥ, ಬಾಗೇಶ್ವರ, ಪಿಂಡಾರಿ ಹಿಮನದಿ, ಅಲ್ಲಿಂದ ಹುಟ್ಟುವ ಪಿಂಡಾರಿ ಗಂಗಾನದಿಯನ್ನು ನೋಡಬಹುದು. ನಂದಪ್ರಯಾಗ–ಆದಿಬದರಿ–ರಾಣಿಖೇತ್ ಮೂಲಕ ಆಲ್ಮೋರಾ ತಲುಪಬಹುದು. ಅಲ್ಮೋರಾದಿಂದ ಸರೋವರ ನಗರಿ ನೈನಿತಾಲಕ್ಕೆ ಹೋಗಿ, ನೈನಾದೇವಿಯ ಆಶೀರ್ವಾದ ಪಡೆಯಬಹುದು. ರಾಣಿಖೇತ್‌ನಲ್ಲಿ ರೇಲ್ವೆ ಸಂಪರ್ಕ ಸಿಗುತ್ತದೆ. ಅಲ್ಲಿಂದ ಕಾಂಗಡಾ ಮೂಲಕ ಧರ್ಮಶಾಲಾಕ್ಕೆ ಹೋಗಬಹುದು. ಅಲ್ಮೋರಾ ಸಮೀಪದ ಕೌಸಾನಿಯಲ್ಲಿ ಮಹಾತ್ಮಾ ಗಾಂಧಿಯವರು ಇದ್ದು, ಗೀತೆಯ ವ್ಯಾಖ್ಯಾನ ಅನಾಸಕ್ತಿಯೋಗ ಬರೆದ ಬಂಗಲೆಯನ್ನು ಗಾಂಧೀ ಸ್ಮಾರಕವನ್ನಾಗಿಸಿದ್ದಾರೆ. ಆಲ್ಮೋರಾ ಸಮೀಪದಲ್ಲೇ ಆನಂದಮಯಿ ಆಶ್ರಮ, ಉತ್ತರವೃಂದಾವನ ಆಶ್ರಮಗಳು ಇವೆ. ಚಂಪಾವತಕ್ಕೆ ಹೋಗಿ, ಅಲ್ಲಿಂದ ಮಾಯಾವತಿಯ ಅದ್ವೈತ ಆಶ್ರಮವನ್ನೂ ದರ್ಶಿಸಬಹುದು.

ಪಂಚ ಕೇದಾರ ಯಾತ್ರೆಯು ಕೇದಾರ್‌ನಾಥ್, ತುಂಗನಾಥ್, ರುದ್ರನಾಥ್, ಮಧ್ಯಮಹೇಶ್ವರ್, ಕಲ್ಪೇಶ್ವರ್‌ಗಳಿಗೆ ಮಾತ್ರ ಭೇಟಿ ಕೊಟ್ಟು, ಪೂಜಿಸುವ ಆಧ್ಯಾತ್ಮಿಕ ಯಾತ್ರೆ. ಇದೇ ಬಗೆಯ ೧೨–೧೩ ದಿನದ ಅಧ್ಯಾತ್ಮಿಕ ಚಾರಣ ಧರ್ಚುಲಾದಿಂದ ಆರಂಭವಾಗಿ, ಅನ್ನಪೂರ್ಣ ಮುಂತಾದ ಗಿರಿಶಿಖರಗಳನ್ನು ನೋಡುತ್ತ ತವಾಘಾಟ್–ಪಂಗು–ಸೋಸ–ಸಿರ್ಖ–ಗಲಗಡ್–ಬುಧಿ–ಗುಂಜಿ–ಕಾಲಾಪಾನಿ–ಓಂಪರ್ವತ–ಕುಟ್ಟಿ–ಜೋಲಿಂಗ್‌ಕಾಂಗ್ ಮಾರ್ಗವಾಗಿ ಛೋಟಾ ಕೈಲಾಸ್ ಅಥವಾ ಆದಿಕೈಲಾಸಕ್ಕೆ ಹೋಗಿ ಬರುವುದು.

**೨) ಹಿಮಾಚಲ ಪ್ರದೇಶ ಯಾತ್ರೆ:** ಬೆಟ್ಟಗಳ ರಾಣಿ ಎನಿಸಿದ ಹಿಮಾಚಲಪ್ರದೇಶದ ರಾಜಧಾನಿ ಸಿಮ್ಲಾದಿಂದ ಅನೇಕ ಸುಂದರ ಸ್ಥಳಗಳಿಗೆ ಹೋಗಬಹುದು. ಸಿಮ್ಲಾ ಅತ್ಯುತ್ತಮ ಗಿರಿಧಾಮ. ಬೇಸಿಗೆ (ಫೆಬ್ರವರಿ–ಮೇ) ಚಾರಣಗಳಿಗೆ ಸೂಕ್ತ ಕಾಲವಾಗಿದ್ದರೆ, ಸಿಮ್ಲಾದಲ್ಲಿಯೇ ನಿಂತು ಹಿಮದಲ್ಲಿ ಆಟವಾಡಲು, ಹಿಮದ ಸೊಗ

ಸನ್ನು ನೋಡಲು ಚಳಿಗಾಲವೂ ಚೆನ್ನ. ಕುಲು-ಮನಾಲಿ ಪ್ರವಾಸಿಗರ ಸ್ವರ್ಗ. ಕನ್ನಡದ ಅನೇಕ ಕೃತಿಗಳಲ್ಲಿ ಇಲ್ಲಿನ ವರ್ಣನೆ ಇದೆ. ಕಸೋಲ್ ಪಾರ್ವತಿ ನದಿಯ ಮೇಲೆ ಇದ್ದು, ಹಲವು ಚಾರಣ ಮಾರ್ಗಗಳನ್ನು ಹೊಂದಿದೆ. ಕಸೌಲಿ ಇನ್ನೊಂದು ಚಾರಣ ಪ್ರಿಯರ ತಾಣವಾಗಿದ್ದು, ನೆಹ್ರಿ ದೇವಾಲಯ ಮತ್ತಿತರ ಸೊಬಗಿನ ಸ್ಥಳಗಳಿಂದ ಕೂಡಿದೆ. ಸ್ಪಿತಿ ಕಣಿವೆ, ಚಿಟ್ಕುಲ್ ಚಾರಣ ಸ್ಥಳಗಳು; ಬಿರ್ ಬಿಲ್ಲಿಂಗ್ ಪ್ಯಾರಾಗ್ಲೈಡಿಂಗ್‌ಗೆ ಹೆಸರುವಾಸಿ; ಖಜ್ಜಿಯಾರ್ ಸಿನೆಮಾ ದೃಶ್ಯಾವಳಿಗೆ ಪ್ರಸಿದ್ಧ. ಧರಂಶಾಲಾ ಕಾಂಗ್ರಾ ಕಣಿವೆಯ ಮಧ್ಯೆ ಇದ್ದು, ಟಿಬೆಟನ್ ಸಂಸ್ಕೃತಿಯ ಪರಿಚಯ ಮಾಡಿಕೊಡುತ್ತದೆ. ಮೆಕ್ಲಿಯೋಡ್‌ಗಂಜ್, ಸಿಂಧಬಾರಿ, ಧರಂಕೋಟ್, ರಾಂನಗರ್, ನಡ್ಡಿಗಳನ್ನೂ ಸೇರಿಸಿ ಎರಡು ದಿನದ ಪ್ರವಾಸ ಮಾಡಬಹುದು. ಚಾರಣ ಸ್ಥಳಗಳೂ ಹಲವು ಇವೆ. ಛಂಬಾ ಜಿಲ್ಲೆಯ ಪೀರ್ ಪಿಂಜಾಲ್ ಪರ್ವತಶ್ರೇಣಿಯ ಮಣಿಮಹೇಶ್ ಕೈಲಾಸ್ ಶಿಖರದ ಬಳಿಯ ಮಾನಸಸರೋವರದಷ್ಟೇ ಪವಿತ್ರವಾದ ಮಣಿಮಹೇಶ್ ಸರೋವರಕ್ಕೆ ಮೂರು ಚಾರಣ ಮಾರ್ಗಗಳಿದ್ದು, ಹಡ್ಸಾರ್-ಧನ್‌ಚೋ ಮಾರ್ಗ ಜನಪ್ರಿಯ. ಕಿನ್ನೌರ್ ಜಿಲ್ಲೆಯ ರೆಕಾಂಗ್ ಪ್ಯೋದಿಂದ ಆರಂಭವಾಗುವ ಕಿನ್ನರ್ ಕೈಲಾಸ್ ಪರಿಕ್ರಮವು ಇನ್ನೊಂದು ಕಠಿಣ ಚಾರಣ.

**೩) ಕಾಶ್ಮೀರ ಯಾತ್ರೆ:** ಇಲ್ಲಿನ ಸರೋವರಗಳು, ತೇಲುವ ಮನೆಗಳು, ವೆನಿಸಿನಂತೆ ದೋಣಿಗಳಲ್ಲೇ ಶ್ರೀನಗರದ ಭಾಗಗಳನ್ನು ತಲುಪುವ ಸೌಕರ್ಯ ಇವುಗಳನ್ನು ನೋಡಿ, ನಿಸರ್ಗವೇ ದೇವರು ಎಂಬ ಭಾವದಿಂದ ವಿನೋಬಾ ಉದ್ಗರಿಸಿದ್ದು: 'ಬ್ರಹ್ಮ ಸತ್ಯಂ ಜಗತ್ ಸ್ಫೂರ್ತಿಃ ಜೀವನಂ ಸತ್ಯದರ್ಶನಂ' ಎಂದು! ಮನೆದೋಣಿಗಳಲ್ಲೆ ಎಲ್ಲ ಸೌಕರ್ಯವಿದ್ದು, ತೇಲುತ್ತ ಒಂದೆಡೆ ಉಳಿಯಬಹುದು ಅಥವಾ ಬೇರೆಡೆ ಹೋಗಿ, ಒಳನಾಡಿನಲ್ಲಿ ಸಣ್ಣ ಶಿಕಾರಾ ದೋಣಿಗಳಲ್ಲಿ ಹೋಗಿ ಬೇಕೆಂದೆಡೆ ಇಳಿದು, ಅಲ್ಲಿನ ದರ್ಶನೀಯ ಸ್ಥಳಗಳನ್ನು ನೋಡಬಹುದು. ಈ ಮನೆದೋಣಿಗಳ ಪಕ್ಕ ಸಣ್ಣ ತೋಡುದೋಣಿಗಳಲ್ಲಿ ತರಕಾರಿ ಇತ್ಯಾದಿ ಮಾರಲು ಬರುವವರ ಹತ್ತಿರ ತಾಜಾ ತರಕಾರಿ ಕೊಂಡು, ಅಡುಗೆ ಮಾಡಿಕೊಳ್ಳಬಹುದು.

ಪಠಾಣಕೋಟದಿಂದ ಹೋಗುವಾಗ ಜಮ್ಮುವಿನಲ್ಲಿ ಒಂದು ದಿನ ಉಳಿಯುತ್ತಾರೆ. ಇಲ್ಲಿನ ರಘುನಾಥ ಮಂದಿರ, ರಣವೀರೇಶ್ವರ ದೇವಸ್ಥಾನ ನೋಡುವಂತಹದು. ಇಲ್ಲಿಂದ ಕಾಟ್ರಾ-ಚರಣ ಪಾದುಕಾ-ಅಡಕನವಾಡಿ-ಹಾಥೀಮಾತಾ-ಜಾನಿಚಟಿ-ಬಾಜೋಘಾಟ್ ಮಾರ್ಗವಾಗಿ ಪ್ರಸಿದ್ಧ ತ್ರಿಕೂಟ ಕ್ಷೇತ್ರ, ವೈಷ್ಣೋದೇವಿ ಮಂದಿರಕ್ಕೆ ಹೋಗಬಹುದು. ಹಿಂದಿರುಗುವಾಗ ಕಾಟ್ರಾ, ಭವಾನಿ ಮಂದಿರಕ್ಕೆ ಹೋಗುತ್ತಾರೆ. ಜಮ್ಮುವಿನ ಸುತ್ತ ಬನಿಹಾಲ್ ಸುರಂಗ, ಆರೋಗ್ಯಧಾಮಗಳಾದ ಕುಡ್ ಮತ್ತು ಬಟೋಟ, ರಾಮಬನ್ ಹತ್ತಿರ ಚೀನಾಬ್ ನದಿಯ ಮೇಲೆ ನಿರ್ಮಿಸಿದ ನೇತಾಡುವ ಸೇತುವೆ, ಝೀಲಂ ನದಿ ಉಗಮಸ್ಥಾನ, ವೇರಿನಾಗ ಉದ್ಯಾನ ಇವೆಲ್ಲ ದರ್ಶನೀಯ. ಶ್ರೀನಗರದ ದಾಲ್ ಮತ್ತು ಅಂಚಾರ ಸರೋವರಗಳು, ಶಂಕರಪರ್ವತದ ಶಂಕರಲಿಂಗ ಮಂದಿರ, ಹಜರತ್ ಬಾಲ್ ಮಸೀದಿ, ಸಮೀಪದ ಅವಂತೀಪುರ ಮಂದಿರಗಳು, ಅನಂತನಾಗ್‌ನಲ್ಲಿ ಚಿಲುಮೆಯ ಮೇಲೆ ನಿರ್ಮಿಸಿದ ಮಂದಿರಗಳು ಪ್ರಸಿದ್ಧವಾಗಿವೆ. ಕಾಶ್ಮೀರದ ಶ್ರೀಶಾರದಾ, ಅಮರನಾಥ, ಕ್ಷೀರಭವಾನಿ, ಮಹಾಕಾಲಿ, ಮೌಂಟ್ ಮಹದೇವ, ಗಂಗಾಬಲ್ ಸರೋವರ, ಕಪಾಲ ಲೋಚನ- ಇವು ಹಿಂದೂ ಯಾತ್ರಾಸ್ಥಳಗಳು. ಶ್ರೀನಗರದ ಸಮೀಪ ಗುಲ್ಮಾರ್ಗ್, ಖಿಲನ್‌ಮಾರ್ಗ್, ಪಹಲ್ಗಾಂವ್, ಸೋನಾಮಾರ್ಗ್, ಆಲೋಪಥರ್, ಹರಮುಖ್ ಕೋಲಾಹಾಯ್, ಅಚ್ಚಾಬಲ್, ಗಂಧಾರ ಬಲ್, ಕೋಕರ್‌ನಾಗ್, ವೂಲರ್ ಸರೋವರ, ಪಾಂಪೂರ್, ಅವಂತೀಪುರ, ಯುಸಮರ್ಗ್, ನೀಲಾಂಗ್, ಲೋಹಾಬ್ ಮೊದಲಾದ ರಮ್ಯ ಸ್ಥಳಗಳಿವೆ.

**೪) ಅಮರನಾಥ ಯಾತ್ರೆ :** ಹಿಮಾಲಯದ ಯಾತ್ರೆಗಳಲ್ಲೆಲ್ಲ ಮುಖ್ಯವಾದುದು. ಶ್ರಾವಣ ಮಾಸದಿಂದ ಅಥವಾ ಜೂನ್‌ನಲ್ಲಿ ಆರಂಭವಾಗಿ, ಮೂರೇ ತಿಂಗಳು ಅಂದರೆ ಆಗಸ್ಟ್‌ನಲ್ಲಿ ಮುಗಿಯುತ್ತದೆ. ಕಾಶ್ಮೀರ ಸರ್ಕಾರದಿಂದ ಪೂರ್ವಾನುಮತಿ ಪಡೆದು, ಭಾರತೀಯ ಪ್ಯಾರಾಮಿಲಿಟರಿ ಪಡೆ, ಕೇಂದ್ರ ಮೀಸಲು ಪಡೆಗಳ ರಕ್ಷಣೆಯಲ್ಲಿ ಯಾತ್ರೆ ನಡೆಯಬೇಕು. ಶ್ರೀನಗರದಿಂದ ೧೪೧ ಕಿ.ಮೀ. ದೂರದಲ್ಲಿರುವ ಅಮರನಾಥ ಒಂದು ಗುಹಾದೇವಾಲಯ. ಜಮ್ಮು ಅಥವಾ ಶ್ರೀನಗರದಿಂದ ತಲುಪಬಹುದಾದ ಪಹಲ್ಗಾಂವ್ ಎಂಬಲ್ಲಿಂದ ಯಾತ್ರೆಯ ಆರಂಭ. ೧೩-೭೫ ವರ್ಷ ವಯಸ್ಸಿನವರು, ಆರೋಗ್ಯದ ಬಗೆಗಿನ ದಾಖಲೆ ಸಲ್ಲಿಸಿ, ಅಮರನಾಥ್ ಶ್ರೈನ್ ಬೋರ್ಡ್‌ನಲ್ಲಿ ಮೊದಲೇ ನೋಂದಾವಣೆ ಮಾಡಿಕೊಂಡವರಿಗೆ ಮಾತ್ರ ಅವಕಾಶ. ಇಲ್ಲಿಂದ ೧೬ ಕಿ.ಮೀ. ದೂರದ ಚಂದನವಾರಿಗೆ ಮಿನಿ ಬಸ್ಸಿನಲ್ಲಿ ಹೋಗಬಹುದು. ವಿಪರೀತ ಚಳಿ, ಆಮ್ಲಜನಕದ ಅಭಾವ, ಭೂಕುಸಿತಗಳು, ಅಸ್ಥಿರ ವಾತಾವರಣ ಇತ್ಯಾದಿಗಳಿಂದ, ನಿಧಾನವಾಗಿ ನಡೆಯುವುದು ಉತ್ತಮ. ದಾರಿಯುದ್ದಕ್ಕೂ ಅಲ್ಲಲ್ಲಿ ಉಚಿತ ಫಲಾಹಾರಗಳ, ವಿಶ್ರಾಂತಿಯ ವ್ಯವಸ್ಥೆಯನ್ನು ವಿವಿಧ ಸಂಸ್ಥೆಗಳು ಮಾಡಿರುತ್ತವೆ. ಪಿಸ್ಸು ಟಾಪ್-ಶೇಷನಾಗ್-ಪಂಚತರಣಿಯ ಮೂಲಕ ೧೨,೭೫೬ ಅಡಿ ಎತ್ತರದಲ್ಲಿರುವ ಅಮರನಾಥಕ್ಕೆ ಹೋಗುವ ಈ ಚಾರಣ ಮಾರ್ಗ ೩೨ ಕಿ.ಮೀ. ದೂರದ್ದು; ಒಟ್ಟು ೩ ರಿಂದ ೫ ದಿನ ತಗುಲುತ್ತದೆ. ಶ್ರೀನಗರ್-ಸೋನಾಮಾರ್ಗ್-ಬಾಲ್‌ಟಲ್‌ವರೆಗೆ ವಾಹನದಲ್ಲಿ ಹೋಗಿ, ಅಲ್ಲಿಂದ ಬರಾರಿ- ಅಮರನಾಥಕ್ಕೆ ಹೋದರೆ ಒಂದೆರಡು ದಿನಗಳ ಚಾರಣ; ಆದರೆ ಅತಿ ಶ್ರಮದಾಯಕ.

**೫) ಸಿಂಧೂ ದರ್ಶನ :** ಯಾತ್ರಾ ಸಮಿತಿಯವರು ಲೇಹ್‌ನ ಸಮೀಪದ ಚೋಗ್ಲಮಸಾರದಲ್ಲಿ ಸಿಂಧೂನದಿಯ ದಂಡೆಯ ಮೇಲೆ ಪ್ರತಿವರ್ಷ ಜೂನ್‌ನಲ್ಲಿ ಗುರುಪೂರ್ಣಿಮಿಯಂದು ನಡೆಯುತ್ತಿದ್ದ ಸಿಂಧೂದರ್ಶನಕ್ಕೆ ಹಲವು ಯಾತ್ರಾಸ್ಥಳಗಳನ್ನು ಸೇರಿಸಿ, ನಾಲ್ಕು ದಿನಗಳ ಯಾತ್ರೆಯನ್ನಾಗಿಸಿದ್ದಾರೆ. ಪ್ರಾಚೀನ ಭಾರತದಲ್ಲಿ ಈ ಪೂಜೆ ನಡೆಯುತ್ತಿತ್ತು. ಸಿಂಧಿಗಳಿಗೆ ಇದು ಪವಿತ್ರ. ವಾಜಪೇಯಿಯವರು (೨೦೦೦ನೇ ವರ್ಷದಲ್ಲಿ) ಲೇಹ್‌ನಿಂದ ೧೫ ಕಿ.ಮೀ. ದೂರದ ಷೇ ಎಂಬ ಸ್ಥಳದಲ್ಲಿ ಈ ಪೂಜೆಯನ್ನು ನೆರವೇರಿಸಿದರು. ಯಾತ್ರಿಕರು ತಂದ ವಿವಿಧ ನದಿಗಳ ನೀರನ್ನು ಸಿಂಧುವಿಗೆ ಸೇರಿಸಲಾಗುತ್ತದೆ. ಈ ಯಾತ್ರೆಯೂ ನೋಂದಾಯಿತರಿಗೆ ಸೀಮಿತ. ಶ್ರೀನಗರ, ಕಾರ್ಗಿಲ್ ಮಾರ್ಗವಾಗಿ ಲೇಹ್‌ಗೆ ಬಂದು ವಾತಾವರಣಕ್ಕೆ ಹೊಂದಿಕೊಳ್ಳಲು ಒಂದು ದಿನ ಕಳೆದು, ಸಿಂಧು

ಘಾಟ್, ಪ್ಯಾನ್‌ಗಾಂಗ್ ಸರೋವರ, ಬೆಹರಾನ ಸಾಹಿಬ್ ಮೊದಲಾದ ಸ್ಥಳಗಳನ್ನು ನೋಡಿ, ಹಿಂದಿರುಗುವುದು ಯಾತ್ರೆಯ ವಿವರ.

**೬) ಕೈಲಾಸ ಮಾನಸ ಯಾತ್ರೆ:** ಟಿಬೆಟ್‌ನಲ್ಲಿರುವ ಹಿಂದೂ, ಜೈನ ಹಾಗೂ ಬೌದ್ಧರಿಗೆ ಪೂಜ್ಯವಾದ ಕೈಲಾಸ ಪರ್ವತ, ಮಾನಸ ಸರೋವರ ಪರಿಕ್ರಮಗಳನ್ನು ಮುಗಿಸಿ ಮರಳುವುದು ಇಲ್ಲಿನ ಉದ್ದೇಶ. ನೇಪಾಳದ ಮೂಲಕ ಲಿಪುಲೇಕ್ ಪಾಸ್, ಸಿಕ್ಕಿಂನ ನಾಥುಲಾ ಪಾಸ್‌ಗಳಿಂದ ೨೩-೨೫ ದಿನಗಳ ಯಾತ್ರೆ ಆರಂಭ. ಮುಂದಿನ ವರ್ಷದಿಂದ ಪಿಥೋರ್‌ಗಡ್-ಘಾಟಿಯಾಬ್‌ಗಡ್ ಮೂಲಕ ಲಿಪುಲೇಕ್ ಪಾಸ್‌ಗೆ ಹೋಗುವ ರಸ್ತೆ ತೆರೆಯಲಾಗುತ್ತಿದ್ದು, ಯಾತ್ರೆಯ ಅವಧಿ ೫-೬ ದಿನ ಕಡಿಮೆಯಾಗಲಿದೆ. ಲಿಪುಲೇಕ್ ಪಾಸ್‌ನಿಂದ ತಕ್ಲಾಕೋಟ್ ಮೂಲಕ ದಾರ್ಚೆನ್, ಹಾಗೂ ಗ್ಯಾಂಗ್ಟಕ್- ಸೆರಾಥಾಂಗ್-ನಾಥುಲಾ ಪಾಸ್-ಕಾಂಗ್ಮಾ-ಲಾಜಿ-ಜೊಂಗ್‌ಬಾ ಮೂಲಕ ದಾರ್ಚೆನ್ ತಲುಪುವರು. ಇಲ್ಲಿಂದ ಕೈಲಾಸ ಪರಿಕ್ರಮ ದೇರಾಪುಕ್-ದೋಲ್ಮಾಲಾ-ಜುಂಜುಯಿ ಪು-ಪನಾಕಾ ಮೂಲಕ ಮತ್ತೆ ದಾರ್ಚೆನ್; ಮಾನಸ ಸರೋವರ ಪರಿಕ್ರಮ, ದಾರ್ಚೆನ್- ಹೊರೆ-ಕುಗು-ಜೈದಿ-ರಾಕ್ಷಸ್‌ತಲ್ ನೋಡಿಕೊಂಡು ಪುನಃ ದಾರ್ಚೆನ್. ಇದು ಸರಕಾರ ಏರ್ಪಡಿಸುವ ಯಾತ್ರೆಯ ವಿವರ. ಖಾಸಗಿಯವರ ಯಾತ್ರೆಗಳಿಗೆ ಬೇರೆಯ ಮಾರ್ಗಗಳಿವೆ. ಕೈಲಾಸ ಮಾನಸ ಸರೋವರ ಯಾತ್ರೆ ಕಷ್ಟದ್ದು, ಆದರೆ ಅಷ್ಟೇ ಪ್ರಭಾವಶಾಲಿ; ಆಧ್ಯಾತ್ಮಿಕ ಯಾತ್ರೆ. ನೇಪಾಳದಲ್ಲಿ ಕಠ್ಮಂಡು ಕಣಿವೆಯ ನಾಗರ್ಕೋಟ್, ಧೂಲಿಖೇಲ್, ದಮನ್, ತನ್ಸೇನ್(ಪಲ್ಪಾ), ಬಂಡೀಪುರ್, ಎಂಟು ಸರೋವರಗಳ ಪೊಖಾರಾ, ಚಿಟ್ಲಾಂಗ್, ಕಾಂಚನಗಂಗಾ ಬಳಿಯ ಇಲಾಂ, ಚಂದ್ರಗಿರಿ, ಪೂನ್ ಹಿಲ್ ಮೊದಲಾದ ಗಿರಿಧಾಮಗಳೂ ಇವೆ. ಸಿಕ್ಕಿಂನಲ್ಲಿ ಗ್ಯಾಂಗ್ಟೋಕ್, ಆರಿತರ್, ಲಾಚುಂಗ್, ಪೆಲಿಂಗ್, ಗೇಜಿಂಗ್ ಮೊದಲಾದ ಗಿರಿಧಾಮಗಳಿವೆ. ಭೂತಾನದಲ್ಲಿ ಫುಯೆಂಟ್‌ಶೋಲಿಂಗ್ ಮೊನಾಸ್ಟ್ರಿ, ಸಂದ್ರುಪ್ ಜೋಂಕರ್, ಹಾ ದೇವಸ್ಥಾನ ಪರ್ವತಗಳ ಮೇಲಿರುವ ಪ್ರವಾಸಿ ಸ್ಥಳಗಳು ಇವೆ. ಇವುಗಳಿಗೆಲ್ಲ ಹೋಗಲು ಐದು ದಿವಸಗಳ ಯಾತ್ರಾ ಪ್ಯಾಕೇಜುಗಳಿವೆ.

**೭) ಅರುಣಾಚಲ ಪ್ರದೇಶ ಯಾತ್ರೆ:** ಸುದ್ದಿಯಲ್ಲಿ ಇರುವ ತವಾಂಗ್ ಈಶಾನ್ಯ ಭಾರತದ ಮುಖ್ಯ ನಗರ. ಇಲ್ಲಿ ನಾಲ್ಕು ನೂರು ವರ್ಷಗಳಷ್ಟು ಹಳೆಯ ಬೌದ್ಧ ಸಂನ್ಯಾಸಿ ಮಠವಿದೆ. ಏಪ್ರಿಲ್‌ನಿಂದ ಜೂನ್ ವರೆಗೆ ಹಿತಕರ ವಾತಾವರಣವಿದ್ದು, ಯಾತ್ರೆಗೆ ಅನುಕೂಲ. ಹತ್ತಿರದ ನೂರನಂಗ್ ಜಲಪಾತ, ಶೋಂಗ ತ್ಸೆರ್ ಸರೋವರ, ಸೆಲಾ ಪಾಸ್ ನೋಡಬಹುದು. ಇದಲ್ಲದೆ ರೋಯಿಂಗ್ ನದಿ ಮತ್ತು ಸರೋವರ, ಭೈರವಕುಂಡ ಕಾಡು, ನಾಮ್‌ಸಾಯಿ ಚಿನ್ನದ ಪಗೋಡ ಪ್ರೇಕ್ಷಣೀಯ.

ವಿಶೇಷವೆಂದರೆ ಟಿಬೆಟ್, ಚೀನಾ ಪ್ರವೇಶಿಸಲು ಅನೇಕ ಹಳೆಯ ಕಣಿವೆ ಮಾರ್ಗಗಳಿವೆ. ಆದರೆ ಚೀನಾ ಒಂದೆರಡನ್ನು ಮಾತ್ರ ತೆರೆದಿಟ್ಟಿದೆ. ಇವೂ, ಇನ್ನಿತರ ಕಣಿವೆ ಮಾರ್ಗಗಳೂ ಪ್ರವಾಸಿ ತಾಣಗಳೇ. ಕಾಶ್ಮೀರದ ಮಿನ್‌ಟಾಕ ಪಾಸ್, ಪಾರ್‌ಪಿಕ್ ಪಾಸ್, ಕುಂಜೇರಬ್ ಪಾಸ್, ಲಡಾಕ್‌ನ ಅಘಿಲ್ ಪಾಸ್, ಬನಿಹಾಲ್ ಪಾಸ್ (ಜವಾಹರ್ ಸುರಂಗದಿಂದಾಗಿ ಬಳಕೆಯಲ್ಲಿಲ್ಲ), ಚಾಂಗ್ ಲಾ, ಖಾರ್‌ಡುಂಗ್ ಲಾ (ಜಗತ್ತಿನ ಅತಿ ಎತ್ತರದ ಮೋಟಾರು ವಾಹನದಿಂದ ಹೋಗಬಹುದಾದ ಸ್ಥಳ), ಲಾನಕ್ ಲಾ (ಅಕ್ಸಾಯಿ ಚಿನ್ ಪ್ರದೇಶದಲ್ಲಿದೆ), ಪೀರ್ ಪಂಜಾಲ್ ಪಾಸ್, ಕಾರಾ ಟಾಗ್ ಲಾ (ಕಾರಾಕೋರಂ ಶ್ರೇಣಿ) ಇಮಿಸ್ ಲಾ, ಪೆನ್ಸಿ ಲಾ (ಕಾರ್ಗಿಲ್‌ಗೆ ಮಾರ್ಗ), ಜೋಜಿ ಲಾ (ಕಾರ್ಗಿಲ್ ಪಕ್ಕ); ಹಿಮಾಚಲ ಪ್ರದೇಶದ ಬಾರಾ ಲಾಚ ಲಾ, ದೇಬ್ಸಾ ಪಾಸ್(ಕುಲು-ಸ್ಪಿತಿ ನಡುವಣ ಪಿನ್-ಪರ್ಬತಿ ಪಾಸ್‌ಗಿಂತ ಹತ್ತಿರದ ದಾರಿ), ರೋಹ್ತಾಂಗ್ ಪಾಸ್(ಪ್ರಖ್ಯಾತ ಪ್ರವಾಸಿ ತಾಣ), ಸ್ಕಿಕೆ ಲಾ (ಟಿಬೆಟ್‌ಗೆ ದಾರಿ) ; ಉತ್ತರಾಖಂಡದ ಸರಸ್ವತೀ ಹಿಮನದಿಯ ಮೇಲಿನ ರುಪಿನ್ ಪಾಸ್(ಹಿಂದಿನ ಸರಸ್ವತೀ ನದಿ ಪಶ್ಚಿಮಕ್ಕೆ ತಿರುಗಿದ ಸ್ಥಳ), ಲಿಪು ಲೇಕ್ ಪಾಸ್ (ಟಿಬೆಟ್, ಚೀನಾ, ನೇಪಾಳಗಳ ಗಡಿ. ಟಿಬೆಟ್‌ಗೆ ಹೋಗುವ ಮಾರ್ಗ), ಬದರಿ ಸಮೀಪದ ಮಾನ ಪಾಸ್, ಮಾಂಗ್ ಶಾ ಧೂರ (ಕೈಲಾಸ ಮಾನಸ ಸರೋವರಕ್ಕೆ ಹಿಂದಿನ ಮಾರ್ಗ) ನಿತಿ ಪಾಸ್, ಮುಲಿಂಗ್ ಲಾ (ಗಂಗೋತ್ರಿಯ ಉತ್ತರಕ್ಕೆ); ಹಿಮಾಚಲ ಪ್ರದೇಶದ ಸರ್ ಪಾಸ್ (ಕುಲು ಸಮೀಪದ ಪಾರ್ವತಿ ಕಣಿವೆಯಲ್ಲಿದೆ, ಸರೋವರದ ಮೇಲೆ ನಡೆದಾಡಬಹುದು), ಪೂರ್ವ ಹಿಮಾಲಯದ ಸಿಕ್ಕಿಂನ ನಾಥು ಲಾ (ಕೈಲಾಸ ಮಾನಸ ಸರೋವರಕ್ಕೆ ಇಂದಿನ ಮಾರ್ಗ), ಸಿಕ್ಕಿಂ-ಭೂತಾನದ ನಡುವಿನ ಚುಂಬಿ ಕಣಿವೆಯ ಜೆಲೆಪ್ ಲಾ, ಅರುಣಾಚಲ ಪ್ರದೇಶ-ಭೂತಾನದ ನಡುವಿನ ಬೊಮ್ ಡಿ ಲಾ, ಅರುಣಾಚಲ ಪ್ರದೇಶ-ಮ್ಯಾನ್‌ಮಾರ್ ನಡುವಿನ ದಿಹಾಂಗ್ ಪಾಸ್, ಅರುಣಾಚಲ ಪ್ರದೇಶ-ಟಿಬೆಟ್ ನಡುವಿನ ಯೋಗ್ಯಾಪ್ ಪಾಸ್, ಇಂಡಿಯಾ-ಚೀನಾ-ಮ್ಯಾನ್ಮಾರ್ ಮೂರೂ ಸೇರುವ ಡಿಫೆರ್ ಪಾಸ್, ಕುಮ್‌ಜಾವ್‌ಂಗ್ ಪಾಸ್, ಪೂಂಗನ್ ಪಾಸ್, ಚನ್‌ಕನ್ ಪಾಸ್.

ಹೀಗೆ ಹಿಮಾಲಯ ತನ್ನ ಔನ್ನತ್ಯದಿಂದ, ಮಹತ್ತಿನಿಂದ ಜನರನ್ನು ಆಕರ್ಷಿಸುತ್ತದೆ. ಲೆಕ್ಕವಿಲ್ಲದಷ್ಟು ಪ್ರವಾಸೀ ತಾಣಗಳು, ಆಧ್ಯಾತ್ಮಿಕ ಯಾತ್ರೆಗಳಿಂದ ಭಾರತೀಯರ ಜನಮಾನಸದಲ್ಲಿ ಅಚ್ಚಳಿಯದ ಪ್ರಭಾವ ಬೀರುತ್ತಿದೆ. ಸಮುದ್ರದಂತೆ, ಆಕಾಶದಂತೆ ಹಿಮಾಲಯವೂ ಮಾನವನ ಕ್ಷುಲ್ಲಕತೆಯನ್ನು ಎತ್ತಿ ತೋರಿ, ಅಹಂಕಾರವನ್ನು ತಗ್ಗಿಸುತ್ತದೆ. ಒಮ್ಮೆಯಾದರೂ ಹಿಮಾಲಯವನ್ನು ನೋಡದೆ ಜೀವನ ಸಂಪೂರ್ಣವಾಗದು.

**ಯಸ್ಯೇಮೇ ಹಿಮವಂತೋ ಮಹಿತ್ವಾ**
**ಯಸ್ಯ ಸಮುದ್ರಮ್ ರಸಯಾ ಸಹಾಹುಃ||**
**ಯಸ್ಯೇಮಾಃ ಪ್ರದಿಶೋ ಯಸ್ಯ ಬಾಹೂ**
**ಕಸ್ಮೈ ದೇವಾಯ ಹವಿಷಾ ವಿಧೇಮ||**

'ಈ ಹಿಮಾಲಯ ಪರ್ವತಗಳು ತಮ್ಮ ಮಹತ್ವದಿಂದ ಯಾರ ಶಿರಸ್ಸಾಗಿದೆಯೋ, ಯಾರ ರಸನೆಯಿಂದ ಈ ಹಿಮರಸದ ಸಮುದ್ರವು ಹುಟ್ಟಿದೆಯೋ, ಈ ದಿಕ್ಕುಗಳು ಯಾರ ಭುಜಗಳೋ ಅಂತಹ ಪ್ರಕಾಶವುಳ್ಳ, ಆನಂದ ರಸರೂಪನಾಗಿದ್ದು ಕಃ ಹೆಸರುಳ್ಳ ಪ್ರಜಾಪತಿ, ಅನಿರ್ವಚನೀಯ ಬ್ರಹ್ಮರೂಪನಾದ ದೇವನಿಗೆ ಹವಿಸ್ಸಿನಿಂದ ಹೋಮ ಮಾಡುತ್ತೇನೆ.' *(ಋಗ್ವೇದ, ೧೦-೧೨೧-೪)* ✽